ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 385/2023

| | | |
|---|---|---|
| ಹೆಸರು | : ಸತೀಶ | ಪಿಡಬ್ಲ್ಯೂ-1 |
| ತಂದೆಯ ಹೆಸರು | : ಲೇಟ್ ಸುನಿಲ್ | ಸಿಡಬ್ಲ್ಯೂ-1 |
| ವಯಸ್ಸು | : ವರ್ಷ 34 | |
| ವೃತ್ತಿ | : ಪೊಲೀಸ್ ಪೇದೆ | |
| ವಾಸ ಸ್ಥಳ | : ಸುಂಟಿಕೊಪ್ಪ | |

ದಿಃ01.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ನಾನು ಕಳೆದ 3 ವರ್ಷಗಳಿಂದ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿವರ್ಹಿಸಿದ್ದೇನೆ.

ದಿಃ16-04-2024 ರಂದು ನನಗೆ ಬೀಟ್ ಕರ್ತವ್ಯಕ್ಕೆ ಚಾಸಾ 11 ನೇಮಕ ಮಾಡಿದ್ದರು. ಬೆಳಿಗ್ಗೆ 11 ಗಂಟೆಗೆ ಮುಳ್ಳೂರು ಗ್ರಾಮಕ್ಕೆ ಹೋಗಿರುತ್ತೇನೆ. ಭಾತ್ಮೀದಾರರಿಂದ ಮಾಹಿತಿ ಬಂದ ಮೇರೆಗೆ ಆರೋಪಿ ಅಕ್ರಮವಾಗಿ ಪುಳಗಂಜಿ ಮಾರುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಾನು ಠಾಣೆಗೆ ಹೋಗಿ ಚಾಸಾ 11 ರವರಿಗೆ ಹೇಳಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ಅದೇ ದಿನ 2.30 ಗಂಟೆಗೆ ಮುಳ್ಳೂರು ಗ್ರಾಮಕ್ಕೆ ನಾನು, ವಾಹನ ಚಾಲಕ, ಚಾಸಾ 4, ಚಾಸಾ 11 ರವರು ಹೋಗಿರುತ್ತೇವೆ. ಆಗ ಚಾಸಾ 7, 8 ರವರನ್ನು ಮುಳ್ಳೂರು ಗ್ರಾಮದಲ್ಲಿ ಸಿಕ್ಕಿರುತ್ತಾರೆ. ಘಟನಾ ಸ್ಥಳಕ್ಕೆ ಹೋದಾಗ ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಸ್ಥಳದಲ್ಲಿ ಪರಿಶೀಲನೆ ಮಾಡಿರುತ್ತೇವೆ. 3 ಅಲ್ಯೂಮಿನಿಯಂ ಪಾತ್ರೆ ಇತ್ತು. ಒಂದರಲ್ಲಿ 50 ಲೀ. ಪುಳಂಗಜಿ ಇತ್ತು, ಎರಡು ಪಾತ್ರೆಗಳು ಖಾಲಿ ಇದ್ದವು. ಇನ್ನೊಂದು ಪಾತ್ರೆಗೆ ಪೈಪ್ ಸೇರಿಸಿರುತ್ತಾರೆ. ಪಕ್ಕದಲ್ಲಿ ಅಲ್ಯೂಮಿನಿಯಂ ಸರ್ಪೆಟ್ ಇರುತ್ತದೆ. ಪಕ್ಕದಲ್ಲಿ 4 ಬಾಟಲ್ ಇದ್ದು ಅದರಲ್ಲಿ 3 ಖಾಲಿ ಇದ್ದು ಒಂದರಲ್ಲಿ ತುಂಬಿ ನೀರಿನಂತೆ ಇರುತ್ತದೆ. ಅದರಲ್ಲಿ ಸರಾಯಿ ಇತ್ತು ಎಂದು ಪಂಚರು ಹೇಳಿರುತ್ತಾರೆ. ಚಾಸಾ 2, 3 ರವರ ಸಮಕ್ಷಮ ವಶಪಡಿಸಿಕೊಂಡು ಒಂದು ಬಿಂದಿಗೆಯಲ್ಲಿ 580 ಮಿಲಿಯನ್ನು ತೆಗೆದುಕೊಂಡು ಬಿಳಿ ಬಟ್ಟೆಯಿಂದ ಸುತ್ತಿ ಕೆ ಎಂಬ ಅಕ್ಷರದಿಂದ ಸೀಲು ಮಾಡಿ

ಆರ್.ಎಫ್.ಎಸ್.ಎಲ್ ಗೆ ಕಳುಹಿಸಿರುತ್ತೇವೆ. ಉಳಿದ ಪುಳಗಂಜಿಯನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ಮಹಜರ್ ಅನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 3 ಅಲೂಮಿನಿಯಂ ಪಾತ್ರೆ, ಒಂದು ಬಿಂದಿಗೆಯನ್ನು, ಅಲ್ಯೂಮಿನಿಯಂ ಸಲ್ವೆಟ್, 2 ಪುಳಂಗಜಿ ಮತ್ತು 1 ಸರಾಯಿ ಬಾಟಲ್ ಅನ್ನು ಕ್ರಮವಾಗಿ ಮುಮಾ 1 ರಿಂದ 8 ಎಂದು ಗುರುತಿಸಲಾಯಿತು. 4 ಛಾಯಾ ಚಿತ್ರಗಳನ್ನು ನಿಪಿ 3 ರಿಂದ 6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರ.ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ